
ತಪಸ್ಸು ಮಾಡಿದ ಸ್ಥಳ. ಅಲ್ಲಿನ ಪ್ರಧಾನ ದೇವಾಲಯದ ನಾರಾಯಣ ವಿಗ್ರಹವು ಕಳೆದುಹೋಗಿತ್ತು. ಆಚಾರ್ಯರು, ಅಲಕನಂದಾ ನದಿಯ ನಾರದಕುಂಡವೆಂಬ ಸ್ಥಳದಲ್ಲಿ ಅದನ್ನು ಹುಡುಕಿಕೊಟ್ಟರು. ತಾವೇ ಅದನ್ನು ದೇವಸ್ಥಾನದಲ್ಲಿ ಪ್ರತಿಷ್ಠಾಪನೆ ಮಾಡಿ, ವೈದಿಕಸಂಪ್ರದಾಯದ ಪ್ರಕಾರ ಪೂಜಾವ್ಯವಸ್ಥೆಯನ್ನೂ ಮಾಡಿದರು. ಅದಕ್ಕಾಗಿ ದಕ್ಷಿಣದ ನಂಬೂದಿರಿ ಬ್ರಾಹ್ಮಣರನ್ನು ನಿಯೋಜಿಸಿದರು. ಅವರನ್ನು 'ರಾವಲ್‌ಜೀ' ಎಂದು ಕರೆಯುತ್ತಾರೆ.



ವ್ಯಾಸಗುಹೆ ಬದರಿಕಾಶ್ರಮದಿಂದ ಸ್ವಲ್ಪ ದೂರದಲ್ಲಿಯೇ ಇದೆ. ವ್ಯಾಸರು ಇಲ್ಲಿ ಕುಳಿತು ಮಹಾಭಾರತವನ್ನು ಬರೆದರೆಂಬ ಪ್ರತೀತಿ. ಇಲ್ಲಿಯೇ ಶಂಕರರು ಗುರುಗಳ ಆದೇಶದಂತೆ ಉಪನಿಷತ್ತುಗಳು, ಭಗವದ್ಗೀತೆ ಮತ್ತು ಬ್ರಹ್ಮಸೂತ್ರಗಳಿಗೆ ಭಾಷ್ಯಗಳನ್ನು ಬರೆದರು. ಅವು ತುಂಬಾ ಜನಪ್ರಿಯವಾದವು.

ಅವರು ಬದರೀಕ್ಷೇತ್ರದಲ್ಲಿ ನೆಲೆಸಿದ್ದಾಗ ಒಬ್ಬ ತೇಜಸ್ವೀ ವೃದ್ಧಬ್ರಾಹ್ಮಣರು ಅಲ್ಲಿಗೆ ಆಗಮಿಸಿದರು. ಶಂಕರಾಚಾರ್ಯರ ವಿಷಯವಾಗಿ ಅವರ ಶಿಷ್ಯರನ್ನು ವಿಚಾರಿಸಿದರು. ಅವರು, "ಭಗವತ್ಪಾದರು ಸರ್ವವೇದಪಾರಂಗತರು, ಉಪನಿಷತ್ತುಗಳನ್ನು ಅನುಭವಪೂರ್ವಕವಾಗಿ ಅರ್ಥಮಾಡಿಕೊಂಡಿದ್ದಾರೆ. ಬ್ರಹ್ಮಸೂತ್ರ, ಉಪನಿಷತ್ ಮತ್ತು ಭಗವದ್ಗೀತೆಗಳಿಗೆ ಭಾಷ್ಯ ಬರೆದಿದ್ದಾರೆ. ಅವರು ಅದ್ವೈತಮತ ಪ್ರತಿಪಾದಕರು" ಎಂದೆಲ್ಲಾ ಪ್ರಶಂಸಿಸಿದರು. ಆಗ ಆ ವೃದ್ಧರು, "ನಿಮ್ಮ ಬಾಲಗುರುಗಳು ವೇದವ್ಯಾಸರಿಂದ ರಚಿತವಾದ ಬ್ರಹ್ಮಸೂತ್ರಗಳಲ್ಲಿ ಯಾವುದಾದರೊಂದು ಸೂತ್ರವನ್ನು ನನ್ನೊಂದಿಗೆ ಚರ್ಚಿಸುವರೇ?" ಎಂದು ವಿಚಾರಿಸಿದರು. ಶಂಕರರು ಇದಕ್ಕೆ ಒಪ್ಪಿದರು.

ಆ ವೃದ್ಧಬ್ರಾಹ್ಮಣರು ಬ್ರಹ್ಮಸೂತ್ರದ ಮೂರನೆಯ ಅಧ್ಯಾಯದ ಒಂದು ಸೂತ್ರಕ್ಕೆ ವಿವರಣೆಯನ್ನು ಬಯಸಿದರು. ಶಂಕರರು ಛಾಂದೋಗ್ಯ ಉಪನಿಷತ್ತಿನಿಂದ ಮಂತ್ರಗಳನ್ನು ಉಲ್ಲೇಖಿಸಿ, ತಮ್ಮ ವಾದವನ್ನು ನಿರೂಪಿಸಿದರು. ಆ ವೃದ್ಧರು ಈ ವಿಷಯವಾಗಿ ಶಂಕರರಿಗೆ ಅನೇಕ ಪ್ರಶ್ನೆಗಳನ್ನು ಹಾಕಿದರು. ಇಬ್ಬರಿಗೂ ಬಹಳ ಕಾಲ ವಾದವಿವಾದ ನಡೆಯಿತು. ಆಗಂತುಕರ ಪ್ರತಿ ಪ್ರಶ್ನೆಯೂ ಹೊಸ ಹೊಸ ತತ್ತ್ವಗಳನ್ನು ಬೆಳಕಿಗೆ ತರುವಂತಿತ್ತು. ಶಂಕರರು ಎಲ್ಲಾ ಪ್ರಶ್ನೆಗಳಿಗೂ ಧರ್ಮಶಾಸ್ತ್ರ, ವೇದೋಪನಿಷತ್ತುಗಳ ಆಧಾರದಿಂದ ಶಾಂತರೀತಿಯಲ್ಲಿ ನಿರೂಪಣೆಯನ್ನು ನೀಡುತ್ತಿದ್ದರು.

ಪದ್ಮಪಾದರೆಂಬ ಒಬ್ಬ ಶಿಷ್ಯರು ಈ ವಾದ-ವಿವಾದಗಳನ್ನು ಸೂಕ್ಷ್ಮವಾಗಿ ಗಮನಿಸಿದರು. ಬ್ರಹ್ಮಸೂತ್ರದ ಮೇಲೆ ಇಂತಹ ಗಹನವಾದ ಚಿಂತನೆಯನ್ನು ಮಾಡುತ್ತಿರುವ ಈ ವೃದ್ಧರು ವೇದವ್ಯಾಸರಲ್ಲದೇ ಬೇರಾರೂ ಆಗಿರಲು ಸಾಧ್ಯವಿಲ್ಲ ಎಂಬ ನಿರ್ಣಯಕ್ಕೆ ಬಂದು, ಗುರುಗಳಿಗೆ ಅರ್ಥವಾಗುವಂತೆ ಅದನ್ನು ಸೂಚಿಸಿದರು. ಆಗ ಶಂಕರರು ಅಂತರ್ಮುಖರಾಗಿ, ಈ ಆಗಂತುಕರು ಭಗವಾನ್ ವೇದವ್ಯಾಸರೇ ಎಂದು ಗುರುತಿಸಿ, ಭಕ್ತಿಭಾವದಿಂದ ಅವರನ್ನು ಸ್ತುತಿಸಿದರು. ವೇದವ್ಯಾಸರು ಶಂಕರರ ವಿದ್ವತ್‌ಪ್ರತಿಭೆಯನ್ನು ಪರೀಕ್ಷಿಸಿ ಅದಕ್ಕೆ ಅಧಿಕಾರದ ಮುದ್ರೆಯನ್ನು ಒತ್ತಿ, ಶಂಕರರ ಬ್ರಹ್ಮಸೂತ್ರ ಭಾಷ್ಯವು ತಮಗೆ ಸಮ್ಮತವೆಂದು ಘೋಷಿಸಿದರು. ವ್ಯಾಸರು ಶಂಕರರನ್ನು ಆಶೀರ್ವದಿಸಿದರಷ್ಟೇ ಅಲ್ಲ, ಶಂಕರರಿಗಿದ್ದ ಮೃತ್ಯುಯೋಗವನ್ನು ನಿವಾರಿಸಿ, ಹದಿನಾರು ವರ್ಷಗಳ ಆಯುಸ್ಸನ್ನು ವರವಾಗಿ ಕೊಟ್ಟರು. ಅದ್ವೈತ ಸಿದ್ಧಾಂತವನ್ನು ಪ್ರಚಾರ ಮಾಡಲು, ಆ ಸಮಯದಲ್ಲಿ ಪ್ರಸಿದ್ಧರಾದ ಕುಮಾರಿಲ ಭಟ್ಟರ ಜೊತೆಗೆ ವಾಕ್ಯಾರ್ಥ ಮಾಡುವಂತೆ ಶಂಕರರಿಗೆ ಹೇಳಿದರು. ಅದಾದ ಮೇಲೆ ಅಂತರ್ಧಾನರಾದರು.

(ಮುಂದುವರಿಯುವುದು)

# ಧರ್ಮದ ಅನುಷ್ಠಾನದ ಆವಶ್ಯಕತೆ

ಸ್ವಾಮಿ ಮುಕ್ತಿದಾನಂದ

**ಭಾ**ರತ ದೇಶವು ಸಾವಿರಾರು ವರ್ಷಗಳ ಭವ್ಯ ಸಾಂಸ್ಕೃತಿಕ, ಧಾರ್ಮಿಕ ಹಾಗೂ ಆಧ್ಯಾತ್ಮಿಕ ಪರಂಪರೆಯ ನೆಲೆವೀಡು. ಈ ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ಆರು ದಶಕಗಳಾದರೂ ನಮ್ಮ ಸಂಸ್ಕೃತಿ ಮತ್ತು ಸನಾತನ ಧರ್ಮದ ಸ್ಥಿತಿ–ಗತಿಗಳು ಪ್ರಾಯೋಗಿಕವಾಗಿ, ಸಾಮಾಜಿಕವಾಗಿ ದುರ್ಬಲವಾಗುತ್ತಿರುವುದು ಶೋಚನೀಯ; ಅಷ್ಟೇ ಅಲ್ಲದೆ ನಮ್ಮ ಜನಸಾಮಾನ್ಯರಲ್ಲಿ ಧರ್ಮಶ್ರದ್ಧೆ ಮತ್ತು ಧರ್ಮಾನುಯಾಯಿಗಳ ಸಂಖ್ಯಾಬಲ ದಿನೇ ದಿನೇ ಕ್ಷೀಣಿಸುತ್ತಿರುವುದನ್ನು ನಾವು ಸ್ಪಷ್ಟವಾಗಿ ಕಾಣಬಹುದು. ಇದೊಂದು ಚಿಂತಾಜನಕ ಪರಿಸ್ಥಿತಿ.



**"ಧರ್ಮವೇ ಭಾರತದ ಜೀವಾಳ. ಆಧ್ಯಾತ್ಮಿಕತೆಯೇ ಭಾರತೀಯ ಸಂಸ್ಕೃತಿಯ ಅನನ್ಯ ಹಾಗೂ ಅತ್ಯಮೂಲ್ಯ ಸಂಪತ್ತು. ನಿಮ್ಮ ಆಧ್ಯಾತ್ಮಿಕ ಸಂಪತ್ತನ್ನು ನಿರ್ಲಕ್ಷಿಸಿ, ಕಣ್ಣುಕೋರೈಸುವ ಪಾಶ್ಚಾತ್ಯ ಭೌತಿಕ ನಾಗರಿಕತೆಯ ಬೆನ್ನುಹತ್ತಿದಲ್ಲಿ, ನಿಮ್ಮ ಜನಾಂಗ ಮೂರು ತಲೆಮಾರುಗಳಲ್ಲಿ ನಿರ್ನಾಮವಾಗುತ್ತದೆ"** ಎಂದರು ಸ್ವಾಮಿ ವಿವೇಕಾನಂದರು. ಈ ಎಚ್ಚರಿಕೆಯ ಮಾತುಗಳಿಗೆ ಯುವಜನಾಂಗ ಹಿಂದಿಗಿಂತಲೂ ಇಂದು ಹೆಚ್ಚು ಸ್ಪಂದಿಸಿ ಮನಗಾಣಬೇಕಾದ ಆವಶ್ಯಕತೆ ಇದೆ.

ಸ್ವಾಮಿ ವಿವೇಕಾನಂದರು ಹೇಳುತ್ತಾರೆ: **"ಧರ್ಮದ ರಹಸ್ಯವಿರುವುದು ಸಿದ್ಧಾಂತಗಳಲ್ಲಲ್ಲ; ಆಚರಣೆಯಲ್ಲಿ. ಧರ್ಮವೆಂದರೆ ಬರೀ ಮಾತಲ್ಲ, ಅದು ಧಾರ್ಮಿಕ ಉಪದೇಶದ ಅನುಷ್ಠಾನ. ಒಂದು ಮಣದಷ್ಟು ಉಪದೇಶಕ್ಕಿಂತ ಒಂದು ಗುಲಗಂಜಿಯಷ್ಟು ಆಚರಣೆ ಎಷ್ಟೋ ಮೇಲು. ಹಿಂದೂಧರ್ಮದಷ್ಟು ಉದಾತ್ತ ತತ್ತ್ವಗಳನ್ನು ಹೇಳುವ ಇನ್ನೊಂದು ಧರ್ಮವಿಲ್ಲ. ಆದರೆ ಪ್ರತ್ಯಕ್ಷ ಆಚರಣೆಯಲ್ಲಿ ಹಿಂದೂಗಳಷ್ಟು ಉದಾಸೀನ ಜನಾಂಗ ಇನ್ನೊಂದಿಲ್ಲ."**

ಅನುಷ್ಠಾನಪ್ರಧಾನವಾದ ಧರ್ಮ ಮಾತ್ರ ಒಂದು ಅಪೂರ್ವ ಜೀವಂತಶಕ್ತಿಯಾಗಿ ಉಳಿಯಬಲ್ಲದು. ವೈಯಕ್ತಿಕ ಹಾಗೂ ಸಾಮಾಜಿಕ ಬದುಕಿನಲ್ಲಿ ಸುಖ, ಶಾಂತಿ, ನೆಮ್ಮದಿಯನ್ನು ತರಬಲ್ಲದು, ಬಾಳನೌಕೆಗೆ ದಾರಿದೀಪವಾಗಬಲ್ಲದು.

ಯಾವ ಧರ್ಮದ ಅನುಯಾಯಿಗಳು ನಿತ್ಯಜೀವನದಲ್ಲಿ ಅನುಷ್ಠಾನವಿಹೀನರಾಗುತ್ತಾರೊ, ಆ ಧರ್ಮ ಕ್ರಮೇಣ ಶಿಥಿಲವಾಗುತ್ತದೆ. ಪ್ರಸಿದ್ಧ ಜೀವವಿಜ್ಞಾನಿ ಲಾಮಾರ್ಕ್ ಹೇಳುವಂತೆ "ಬಳಕೆಯಲ್ಲಿ ಇಲ್ಲದ್ದು ತಾನಾಗಿ ನಶಿಸಿಹೋಗುತ್ತದೆ" (Disuse leads to atrophy).

ಧರ್ಮದ ಅವನತಿಗೆ ಮತ್ತೊಂದು ಮುಖ್ಯ ಕಾರಣವೆಂದರೆ ಧರ್ಮದ ತಿರುಳಾದ ಸತ್ಯ ಮತ್ತು ಪ್ರಾಮಾಣಿಕತೆಗಳ ಕೊರತೆ. ಸಾವಿರಾರು ವರ್ಷಗಳ ಆಘಾತಗಳಿಂದ ಸನಾತನಧರ್ಮ ಉಳಿದುಕೊಂಡು ಬಂದಿರುವುದು ನೈತಿಕ ಬಲದಿಂದ. ಯಾವಾಗ ನಾವು ಧರ್ಮವನ್ನು ಕೇವಲ ಕಂದಾಚಾರಗಳಿಗೆ ಸೀಮಿತಗೊಳಿಸಿ ನೈತಿಕತೆಗೆ ಪ್ರಾಧಾನ್ಯ ನೀಡುವುದಿಲ್ಲವೊ ಆಗ ನಿಜವಾದ ಧರ್ಮ ಹಿಮ್ಮೆಟ್ಟುತ್ತದೆ.

ಇಂತಹ ಶೋಚನೀಯ ಪರಿಸ್ಥಿತಿಯನ್ನು ನಾವಿಂದು ಎದುರಿಸುತ್ತಿದ್ದೇವೆ. ಬದುಕನ್ನು ಶ್ರೀಮಂತಗೊಳಿಸುವ, ಅದಕ್ಕೊಂದು ಅರ್ಥ ನೀಡುವ ಮೌಲ್ಯಾಧಾರಿತ ಸನಾತನಧರ್ಮದ ಅನುಷ್ಠಾನದ ಕೊರತೆಯ ಬರಗಾಲವನ್ನು ಯುವಜನಾಂಗ ಇದೀಗ ಎದುರಿಸುತ್ತಿದೆ. ಅನ್ಯಮತೀಯರಲ್ಲಿ ಅವರವರ ಮತದ ಬಗ್ಗೆ ಶ್ರದ್ಧೆ, ಶಿಸ್ತಿನ ಜೊತೆಗೆ ಅನುಷ್ಠಾನದ ಕಾಳಜಿಯಿದೆ. ಆದರೆ ಬಹುತೇಕ ಸನಾತನ ಧರ್ಮೀಯರು ಅದೇಕೋ ತಮ್ಮ ಧರ್ಮ–ಕರ್ಮಾನುಷ್ಠಾನದಲ್ಲಿ ಆ ಬಗೆಯ ಅಚಲ ನಿಷ್ಠೆಯನ್ನು

ಇಂದಿನ ಯುವಜನಾಂಗ ಧರ್ಮದ ಅನುಷ್ಠಾನದಲ್ಲಿ ಹಿಂದೆಬೀಳುತ್ತಿದೆ. ಆ ಮೂಲಕ ನಮ್ಮ ಪ್ರಾಚೀನರು ಬಿಟ್ಟುಹೋಗಿರುವ ಅಮೂಲ್ಯ ಆಧ್ಯಾತ್ಮಿಕ ಸಂಪತ್ತನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಧರ್ಮವನ್ನು ಕ್ರಿಯೆ ಮತ್ತು ನಡವಳಿಕೆಗಳ ಮೂಲಕ ಅನುಷ್ಠಾನಕ್ಕೆ ತರುವ ಮಹತ್ವವನ್ನು ಪ್ರಾಯೋಗಿಕವಾಗಿ ತಿಳಿಸಿಕೊಟ್ಟಿರುವ ಸ್ವಾಮೀಜಿಯವರು ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲೆಯ ಮುಖ್ಯಸ್ಥರು.

ತೋರುತ್ತಿಲ್ಲ. ಇದಕ್ಕೆ ಕಾರಣವೇನು? ಧಾರ್ಮಿಕ ಶಿಕ್ಷಣದ ಕೊರತೆ ಎನ್ನೋಣವೆ? ಅಥವಾ ತಿಳಿವಳಿಕೆಯ ಅಭಾವವೆ? ಉದಾತ್ತ ಆಧ್ಯಾತ್ಮಿಕ ಚಿಂತನೆಗಳ ಅಲಕ್ಷ್ಯವೆ? ಅಜ್ಞಾನವೆ? ಅಥವಾ ಆಚರಣೆಗೆ ತರಲು ಬೇಕಾದ ಯೋಗ್ಯ ತರಬೇತಿಯ ಕೊರತೆಯೆ? ಸ್ವಲ್ಪ ಸಾವಧಾನದಿಂದ ಯೋಚಿಸಬೇಕಾದ ವಿಷಯವಿದು.

ವಿದ್ಯಾವಂತ ಭಾರತೀಯರೆನಿಸಿಕೊಂಡವರಲ್ಲಿ ಈ ಧರ್ಮದ ಅರಿವು ಜಾಗೃತವಾಗಿದೆಯೇ? ನಮ್ಮ ಸಂಸ್ಕೃತಿಯ ಹಿರಿಮೆಯ ಜ್ಞಾನ ಮನೆ ಮಾಡಿದೆಯೇ? ಆಧ್ಯಾತ್ಮಿಕ ಅನುಷ್ಠಾನವನ್ನು ಕುರಿತ ಚಿಂತನೆ ನಮ್ಮಲ್ಲಿ ಬೇರೂರಿದೆಯೆ? ಈ ದಿಸೆಯಲ್ಲಿ ಹಿಂದುಳಿದ, ಗ್ರಾಮಾಂತರ ಅನಕ್ಷರಸ್ಥ ಬಡ ಕುಟುಂಬಗಳಷ್ಟೇ ಏಕೆ, ಪಟ್ಟಣದ ವಿದ್ಯಾವಂತ ಯುವಜನತೆ ಕೂಡ ಯಾವುದೇ ಆಧ್ಯಾತ್ಮಿಕ ಮಾರ್ಗದರ್ಶನವಿಲ್ಲದೆ, ಆಧಾರವಿಲ್ಲದೆ, ಅವಲಂಬನೆ ಯಿಲ್ಲದೆ, ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳಲಾಗದ ಅತಂತ್ರ ಸ್ಥಿತಿಯಲ್ಲಿದ್ದಾರೆ ಎನ್ನುವುದು ತುಂಬ ವಿಷಾದಕರ.

ನಮ್ಮ ಅನುಪಮ ಸಂಸ್ಕೃತಿಯನ್ನು ಕುರಿತಂತೆ ಅಪಾರ ಪ್ರಮಾಣದಲ್ಲಿ ವಿಫಲತೆಗಳೇ ತಾಂಡವವಾಡುತ್ತಿರುವುದನ್ನು ದೇಶದ ಎಲ್ಲೆಡೆ ಕಾಣುತ್ತಿದ್ದೇವೆ. ಈ ಸಾಂಸ್ಕೃತಿಕ ಸಂಪತ್ತನ್ನು ಜನಸಮುದಾಯ ಕಳೆದುಕೊಂಡು, ಅದನ್ನು ಮತ್ತೆ ಪಡೆಯಲಾಗದ ಒಂದು ಅಪಾಯದ ಅಂಚನ್ನು ತಲುಪಲಿದ್ದೇವೆ. ಮುಂದಿನ ಶತಮಾನ ಗಳಲ್ಲಿ ನಾವೂ ಕೂಡ ಪಾರ್ಸಿ ಜನಾಂಗದಂತೆ, ಹರಪ್ಪಾ ಮೊಹೆಂಜೊದಾರೊ ನಾಗರಿಕತೆಯಂತೆ ಕ್ಷೀಣಿಸಿ, ಅವಸಾನ ಹೊಂದುವ ಸಾಧ್ಯತೆಗಳಿವೆ. ಆದ್ದರಿಂದ ನಾವು ಈಗಲಾದರೂ ಎಚ್ಚೆತ್ತುಕೊಳ್ಳುವುದು ಅನಿವಾರ್ಯ, ಅತ್ಯಗತ್ಯ. ಒಂದು ವೇಳೆ ಭವಿಷ್ಯದಲ್ಲಿ ಈ ಸನಾತನ ಧರ್ಮವು ಕ್ಷೀಣಿಸಿದಲ್ಲಿ ಅಥವಾ ಶಿಥಿಲ ಹೊಂದಿದಲ್ಲಿ ವಿಶ್ವದ ಒಂದು ವಿಶಿಷ್ಟ ಧರ್ಮವು ಕಣ್ಮರೆಯಾದಂತೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ಇದನ್ನು ಮನಗಂಡು, ಅಂತಹ ವಿಷಮ ಸ್ಥಿತಿ ತಲುಪದಂತೆ ನಾವು ಈಗಲೇ ಶೀಘ್ರವಾಗಿ ಕಾರ್ಯೋನ್ಮುಖರಾಗಬೇಕು.

### ಯುವಜನತೆಯ ಹೊಣೆಗಾರಿಕೆ

ಧರ್ಮವೆಂಬುದು ಸೂರ್ಯನ ಕಿರಣದಂತೆ, ತಂಗಾಳಿಯ ತಂಪಿನಂತೆ. ಯಾವ ತಾರತಮ್ಯವಿಲ್ಲದೆ ಎಲ್ಲರಿಗೂ ಇದು ದಕ್ಕಬೇಕು. ದೇಶದ ಸಮಸ್ತ ಬಾಂಧವರಿಗೆ ಇದು ದೊರೆಯುವಂತಾಗಬೇಕು. ಸರಿಯಾದ ಧಾರ್ಮಿಕ ಶಿಕ್ಷಣದ ಮೂಲಕ ಇದನ್ನು ಸಾಮಾನ್ಯರ ಸ್ತರಕ್ಕೊಯ್ದು ಎಲ್ಲರಿಗೂ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಇದನ್ನು ಬೋಧಿಸಿ ನಾಡಜನರನ್ನು ಅನುಷ್ಠಾನಪರರಾಗುವಂತೆ ಪ್ರೇರೇಪಿಸಬೇಕು. ಈ ಕಾರ್ಯಸೂಚಿ ಇಂದಿನ ಅತ್ಯಗತ್ಯಗಳಲ್ಲಿ ಒಂದು.

ಆಧುನಿಕ ಜೀವನದ ಅನೇಕ ಸಂಕೀರ್ಣ ಸಮಸ್ಯೆ, ಸವಾಲು ಗಳಿಗೆ ಸಮಾಧಾನ ನೀಡಬಲ್ಲ ಸಾಮರ್ಥ್ಯ ನಮ್ಮ ಪ್ರಾಚೀನ ವಿಶ್ವಮಾನ್ಯ ಉದ್ಗ್ರಂಥಗಳಿಗಿದೆ. ಸಮಗ್ರ ಜೀವನದೃಷ್ಟಿ, ವಿಶಾಲ ಮನೋಭಾವ ಮತ್ತು ವೈಶಿಷ್ಟ್ಯಪೂರ್ಣ ಆಧ್ಯಾತ್ಮಿಕತೆಯ ಹಿನ್ನೆಲೆಯನ್ನು ಭಗವದ್ಗೀತೆ, ಉಪನಿಷತ್ತು, ರಾಮಾಯಣ, ಮಹಾಭಾರತ ಮೊದಲಾದ ಮಹಾಕೃತಿಗಳಲ್ಲಿ ಸ್ಪಷ್ಟವಾಗಿ ನಾವು ಕಾಣಬಹುದು.

ಉಪನಿಷತ್ತು, ಗೀತೆ ಮುಂತಾದ ಧರ್ಮಗ್ರಂಥಗಳ ವೈಚಾರಿಕ ಹಿನ್ನೆಲೆಯನ್ನು ಹೊಂದಿದ್ದು, ವಿಜ್ಞಾನ ಮತ್ತು ಆಧುನಿಕತೆಯನ್ನು ಮೇಳೈಸಿಕೊಳ್ಳಬಲ್ಲ ಪೂರ್ಣದೃಷ್ಟಿ ಇರುವ ಪ್ರಗತಿಪರವಾದ ಈ ನಮ್ಮ ಸನಾತನ ಧರ್ಮ ಇಡೀ ವಿಶ್ವದಲ್ಲೇ ಅನುಪಮವಾಗಿದೆ. ಇಂದಿನ ಯುವಜನತೆ ಇದನ್ನು ಅರಿತುಕೊಂಡು ತಮ್ಮ ಶಕ್ತಿ, ಸಾಮರ್ಥ್ಯ ಬೆಳೆಸಿಕೊಂಡು ಕಾರ್ಯೋನ್ಮುಖರಾಗಬೇಕು.

### ಅನುಷ್ಠಾನಕ್ಕಾಗಿ ಕೆಲವು ಸಲಹೆಗಳು

ಸಾವಿರಾರು ಸಾಧುಸಂತರನ್ನು, ಮಹಾತ್ಮರನ್ನು ಸೃಷ್ಟಿಸಿದ ಈ ಧರ್ಮ ಉಳಿಯಬೇಕಿದ್ದರೆ, ಯೋಗ, ಪ್ರಾಣಾಯಾಮ, ಪ್ರಾರ್ಥನೆ, ಪೂಜೆ ಜಪ ತಪ, ಸೇವೆ, ದೀನರ ಬಗ್ಗೆ ಅನುಕಂಪ, ನೈತಿಕತೆ ಮೊದಲಾದ ಉದಾತ್ತ ಮೌಲ್ಯಗಳ ಅನುಷ್ಠಾನ ಅವಶ್ಯಕ. ಆಗ ಮಾತ್ರ ಅರ್ಥಪೂರ್ಣ ಧಾರ್ಮಿಕ ಆಚರಣೆಯು ನಿಜ ಜೀವನದ ಒಂದು ಅವಿಭಾಜ್ಯ ಅಂಗವಾಗಬಲ್ಲುದು; ಅಂತಹ ಅನುಷ್ಠಾನವು ಮಾತ್ರ ಪರಿಣಾಮಕಾರಿಯಾಗಬಲ್ಲದು.

ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ, ಜನಸಾಮಾನ್ಯರಿಗೆ ಅನು ಕೂಲವಾಗುವಂತೆ ಈ ಅನುಷ್ಠಾನಸೂಚಿಯನ್ನು ನೀಡಲಾಗಿದೆ. ಇಲ್ಲಿ ಅಳವಡಿಸಿರುವ ಸುಲಭವಾದ ಶ್ಲೋಕ, ಮಂತ್ರ, ಪ್ರಾರ್ಥನೆ, ಜಪ, ಧ್ಯಾನ ಮುಂತಾದವುಗಳ ಅಂತರಾರ್ಥವನ್ನು ಅರಿತು ಪ್ರತಿದಿನ ಮನೆಮನೆಗಳಲ್ಲಿ ಇವನ್ನು ಆಚರಿಸುವುದರಿಂದ ಬುದ್ಧಿಗೆ ಪುಷ್ಟಿ, ಮನಸ್ಸಿಗೆ ಅಂತಃಶಕ್ತಿ ದೊರಕುತ್ತದೆ; ವಿವೇಕ ಜಾಗೃತ ವಾಗುತ್ತದೆ. ಸಾಮಾಜಿಕ ಪುನಶ್ಚೇತನವಾಗಿ ಶಾಂತಿ, ಸೌಹಾರ್ದ ಇರುವ ವಾತಾವರಣ ನಿರ್ಮಾಣವಾಗುತ್ತದೆ. ನಮಗೆ ಇಂದು ಬೇಕಾಗಿರುವುದು ಮಾನವ ಅನುಕಂಪವನ್ನು ಆಧರಿಸಿದ ಅರ್ಥ ಪೂರ್ಣ ಧರ್ಮದ ಅನುಷ್ಠಾನ.

ಭಗವಂತನು ನಮ್ಮ ಅಂತರ್ಯಾಮಿ. ನಮ್ಮ ಬಾಳಿನ ಆಧಾರ, ಅರ್ಥ ಅವನೇ ಆಗಿದ್ದಾನೆ. ಭಗವಂತನ ಮಹಿಮೆಯನ್ನು ಶ್ರದ್ಧೆಯಿಂದ ತಿಳಿದು ಅವನ ಯಾವುದೇ ನಾಮ, ರೂಪ, ದೈವೀ ಗುಣದ ಆರಾಧನೆಯನ್ನು ಪ್ರತಿದಿನ ಮಾಡಬೇಕು.

ನಾಮಜಪವೆಂದರೆ ಭಗವಂತನ ಯಾವುದೋ ಒಂದು ಹೆಸರನ್ನು ಪದೇ ಪದೇ ಉಚ್ಚರಿಸುತ್ತಾ ಅವನ ಸ್ಮರಣೆಯನ್ನು ಮನಸ್ಸಿನಲ್ಲಿಯೇ ಮಾಡುವ ಕ್ರಮ.

ಧ್ಯಾನವು ಭಗವದಾರಾಧನೆಯ ಒಂದು ರೀತಿ. ಧ್ಯಾನದ ನಿಯಮಿತ ಅಭ್ಯಾಸದಿಂದ ಮನಸ್ಸು ಸಂಸ್ಕಾರಗೊಂಡು ಶುದ್ಧವಾಗುತ್ತದೆ. ಅಂತರಂಗವು ದೈವತ್ವದತ್ತ ವಾಲುತ್ತದೆ. ಮನಸ್ಸಿನ ಒಳಗಣ್ಣನ್ನು ತೆರೆಯಲು ಧ್ಯಾನವೇ ಹೆದ್ದಾರಿ. ರೂಪಧ್ಯಾನವೆಂದರೆ ಭಗವಂತನ ರೂಪವನ್ನು ಕಲ್ಪಿಸಿಕೊಂಡು ಅದನ್ನೇ ನಿರಂತರ ಸ್ಮರಿಸುವ ವಿಧಾನ. ಗುಣಧ್ಯಾನವೆಂದರೆ ಸ್ತೋತ್ರಗಳ ಮೂಲಕ ಭಗವಂತನನ್ನು ಆರಾಧಿಸುವುದು.

ವಿಷ್ಣುಸಹಸ್ರನಾಮ, ಭಗವದ್ಗೀತೆ, ರಾಮರಕ್ಷಾ ಸ್ತೋತ್ರ ಮುಂತಾದ ಸ್ತೋತ್ರಗಳನ್ನು ನಿತ್ಯವೂ ನಾವು ಪಾರಾಯಣ ಮಾಡಿ ಹೃದ್ಗತವನ್ನಾಗಿ ಮಾಡಿಕೊಳ್ಳಬೇಕು.

ಈ ಕೆಳಗೆ ಸೂಚಿಸಿರುವ ಧಾರ್ಮಿಕ ಅನುಷ್ಠಾನವನ್ನು ಆಯಾ ಮನೆಯ ಸಂಪ್ರದಾಯದ ಜತೆ ಅಳವಡಿಸಿಕೊಂಡು ಅದನ್ನು ತಮ್ಮದೇ ಆದ ರೀತಿಯಲ್ಲಿ ಆಚರಿಸಬಹುದು. ಮುಖ್ಯವಾಗಿ ಬೇಕಾಗಿರುವುದೆಂದರೆ ಧರ್ಮಶ್ರದ್ಧೆ, ಆತ್ಮವಿಶ್ವಾಸ ಹಾಗೂ ಅನುಷ್ಠಾನದ ಆವಶ್ಯಕತೆಯ ಬಗ್ಗೆ ತಿಳಿವಳಿಕೆ.

೧. ಎಲ್ಲರ ಒಳಿತಿಗಾಗಿ ಪ್ರಾರ್ಥನೆ. ೨. ದೇವ–ದೇವಿಯರ ಪ್ರಾರ್ಥನೆ. ೩. ತೇಜಸ್ಸು, ಓಜಸ್ಸು ಮತ್ತು ಆತ್ಮಶಕ್ತಿ ಕುರಿತ ಪ್ರಾರ್ಥನೆ. ೪. ಭಾವಪೂರಿತವಾದ ದೇವರನಾಮಗಳು. ೫. ಬುದ್ಧಿಯ ಜಾಗೃತಿಗಾಗಿ ಗಾಯತ್ರಿ ಉಪಾಸನೆ. ೬. ತಮ್ಮ ಇಷ್ಟದೇವತೆಯ ನಾಮಸ್ಮರಣೆ – ಇವುಗಳ ಮೇಲೆ ಇಲ್ಲಿ ಸೂಚಿಸಿರುವ ಶ್ಲೋಕಗಳಲ್ಲಿ ಮುಖ್ಯವಾಗಿ ಒತ್ತನ್ನು ನೀಡಲಾಗಿದೆ.

ಸರ್ವರ ಹಿತಕ್ಕಾಗಿ, ಧಾರ್ಮಿಕ ಪ್ರಜ್ಞೆಯ ವಿಕಾಸಕ್ಕಾಗಿ, ವ್ಯಕ್ತಿತ್ವದ ಬೆಳವಣಿಗೆಗಾಗಿ, ಏಕಾಗ್ರತಾಶಕ್ತಿಯ ಪ್ರಾಪ್ತಿಗಾಗಿ, ಸಕಲ ಸಂಕಷ್ಟಗಳ ನಿವಾರಣೆಗಾಗಿ ಮತ್ತು ಶಕ್ತಿ–ಯಶಸ್ಸಿನ ಪ್ರಾಪ್ತಿಗಾಗಿ ಜಾತಿ–ಮತ–ಕುಲ–ಗೋತ್ರಗಳ ಭೇದವಿಲ್ಲದೆ ಸಮಸ್ತ ದೇಶ ಬಾಂಧವರೂ ಎಲ್ಲ ಸನ್ನಿವೇಶಗಳಲ್ಲೂ ಅನುಷ್ಠಾನ ಮಾಡಬಹುದಾದ ಸುಲಭ ಸರಳ ರೀತಿಯಲ್ಲಿ ಈ ಸೂಚಿಯನ್ನು ಸಿದ್ಧಗೊಳಿಸಲಾಗಿದೆ.

ಭಗವಂತನ ನಿಜವಾದ ಆರಾಧನೆಯೆಂದರೆ ಅವನ ಮಕ್ಕಳ ಸೇವೆ ಎಂದು ಸ್ವಾಮಿ ವಿವೇಕಾನಂದರೆನ್ನುತ್ತಾರೆ. ಅವರು ಹೇಳುವಂತೆ, ಕಷ್ಟ, ದುಃಖದಿಂದ ಬಳಲುತ್ತಿರುವವರಿಗೆ 'ಶಿವ ಭಾವದಲ್ಲಿ ಜೀವಸೇವೆ' ಎಂಬ ನಿಃಸ್ವಾರ್ಥಭಾವದಿಂದ ಸೇವೆ ಮಾಡಬೇಕು.

### ಈ ಸ್ಫೂರ್ತಿವಾಣಿಯನ್ನು ಒಮ್ಮೆ ಧ್ಯಾನಿಸಿ

ಈ ನಿಟ್ಟಿನಲ್ಲಿ ಸ್ವಾಮಿ ವಿವೇಕಾನಂದರ ತೂರ್ಯವಾಣಿಗೆ ಒಮ್ಮೆ ಕಿವಿಗೊಡೋಣ. "ಪ್ರತಿಯೊಂದು ರಾಷ್ಟ್ರವೂ ನಿರ್ವಹಿಸಬೇಕಾದ ದೈವದತ್ತ ಕಾರ್ಯವೊಂದುಂಟು; ನೀಡಬೇಕಾದ ಸಂದೇಶವೊಂದುಂಟು; ಪೂರೈಸಬೇಕಾದ ಜೀವನಧ್ಯೇಯವೊಂದುಂಟು. ಹೀಗಾಗಿ ನಮ್ಮ ಜನಾಂಗಕ್ಕೊಂದು ನಿಗದಿಯಾಗಿರುವ ಆಧ್ಯಾತ್ಮಿಕ ಹೊಣೆಗಾರಿಕೆಯೊಂದಿದೆ ಎನ್ನುವುದನ್ನು ನಾವು ಮನಗಾಣಬೇಕು."

"ಭಗವಂತನ ಯೋಜನೆಯಂತೆ ನಾವು ಹಿಂದೂಗಳು ಅತ್ಯಂತ ಹೊಣೆಗಾರಿಕೆಯ ಸ್ಥಾನದಲ್ಲಿ ನಿಂತಿದ್ದೇವೆ. ಪಾಶ್ಚಾತ್ಯ ರಾಷ್ಟ್ರಗಳು ಅಧ್ಯಾತ್ಮದ ನೆರವಿಗಾಗಿ ನಮ್ಮ ಕಡೆಗೆ ಧಾವಿಸುತ್ತಿವೆ. ಹೀಗಾಗಿ ಮಾನವ ಬದುಕಿನ ಗೊತ್ತುಗುರಿಗಳನ್ನು ಪ್ರಪಂಚದ ಜನರಿಗೆ ತಿಳಿಸಿಕೊಡುವ ನೈತಿಕ ಹೊಣೆಗಾರಿಕೆ ಭಾರತದ ಮಕ್ಕಳಾದ ನಮ್ಮ ಹೆಗಲಿಗೇ ಬಂದಿದೆ. ಪ್ರಪಂಚವನ್ನೇ ಭಾರತದ ಆಧ್ಯಾತ್ಮಿಕತೆ ಜಯಿಸಬೇಕೆಂಬುದೇ ನನ್ನ ಏಕಮಾತ್ರ ಬಯಕೆ."

### ಸಂಕಲ್ಪ

ಭಾರತವು ಧರ್ಮ ಮತ್ತು ಆಧ್ಯಾತ್ಮಿಕತೆಗಳ ತವರೂರು ಎಂಬುದನ್ನು ಜಗತ್ತಿಗೆ ತೋರಿಸಿ ಸ್ವಾಮಿ ವಿವೇಕಾನಂದರು ಜನಮಾನಸದಲ್ಲಿ ಅತಿ ಪ್ರಖರವಾದ ಆತ್ಮಗೌರವವನ್ನು ಹೊಡೆದೆಬ್ಬಿಸಿದ್ದಾರೆ. ಅಷ್ಟೇ ಅಲ್ಲ, ಜನರೆದೆಗೆ ಸ್ಫೂರ್ತಿ, ಉತ್ಸಾಹಗಳನ್ನೆರೆದು ನಮ್ಮ ಸಾಂಸ್ಕೃತಿಕ ಸಂಪತ್ತನ್ನು ಕಾಪಾಡಿಕೊಳ್ಳಲು ಕಳಕಳಿಯ ಕರೆಯನ್ನಿತ್ತಿದ್ದಾರೆ. ಸ್ವಾಮೀಜಿಯ ಜೀವನದರ್ಶನ ಹಾಗೂ ಉದ್ದೇಶಗಳಿಗೆ ನಿಷ್ಠರಾಗಿರಬೇಕಾದರೆ, ನಾವು ರಾಷ್ಟ್ರಪ್ರಜ್ಞೆಯನ್ನು ಮತ್ತೆ ತೇಜಸ್ವಿಗೊಳಿಸುವ ಸಂಕಲ್ಪ ಮಾಡಬೇಕು.

### ಪರಮ ಪುರುಷಾರ್ಥ

ನಮ್ಮ ರಾಷ್ಟ್ರವನ್ನೇ ಅಲ್ಲ, ಮಾನವಕೋಟಿಯನ್ನೇ ಉದ್ಧಾರಗೊಳಿಸುವಷ್ಟು ಚೈತನ್ಯವನ್ನುಳ್ಳ ಏಕಮಾತ್ರ ಜೀವನಾದರ್ಶ ನಮ್ಮ ಆಧ್ಯಾತ್ಮಿಕ ಸಂಪತ್ತಿಗಿದೆ. ಇಂತಹ ಉದಾತ್ತತೆಯನ್ನು ಸಾಕಾರಗೊಳಿಸುವಲ್ಲಿ ನಮ್ಮ ಎಲ್ಲ ಶಕ್ತಿಸಾಹಸಗಳನ್ನು ಮುಡಿಪಾಗಿಡುವುದಕ್ಕಿಂತ ಹೆಚ್ಚಿನ ಪುರುಷಾರ್ಥ ಮತ್ತೆ ಇನ್ನಾವುದಿದೆ? ಜೀವನ ಸಾರ್ಥಕ್ಯ ಹಾಗೂ ಪರಿಪೂರ್ಣತೆ ತಂದುಕೊಡುವಂತಹ ಈ ನಿಲುವಿಗಿಂತ ಮಿಗಿಲಾದ ಮಹತ್ಕಾರ್ಯ ಬೇರಾವುದಿದೆ?

## ಪ್ರತಿದಿನ ಮುಂಜಾನೆ ಪಠಿಸಬಹುದಾದ ಪ್ರಾರ್ಥನಾ ಶ್ಲೋಕಗಳು

### ೧. ಸರ್ವರ ಒಳಿತಿಗಾಗಿ ಪ್ರಾರ್ಥನೆ

**ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯಾಃ।**
**ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿದ್ದುಃಖಭಾಗ್‌ಭವೇತ್॥**

ಎಲ್ಲರೂ ಸುಖಿಗಳಾಗಿರಲಿ; ಎಲ್ಲರೂ ಆರೋಗ್ಯವಂತರಾಗಿರಲಿ (ರೋಗಹೀನರಾಗಿರಲಿ). ಎಲ್ಲರೂ ಶುಭಗಳನ್ನೇ (ಮಂಗಳಕರ ಸಂದರ್ಭಗಳನ್ನೇ) ಕಾಣಲಿ; ಯಾರೂ ಸಹ ದುಃಖವನ್ನು ಅನುಭವಿಸುವುದು ಬೇಡ.

### ೨. ಗುರುವಂದನೆ

**ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ ।**
**ಗುರುಸ್ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ ॥**

ಗುರುವೇ ಸಕಲ ಸೃಷ್ಟಿ–ಸ್ಥಿತಿ–ಲಯಗಳಿಗೆ ಕಾರಣನಾದ ಬ್ರಹ್ಮ, ವಿಷ್ಣು ಹಾಗೂ ಮಹೇಶ್ವರ. ಅಂತಹ ಪರಬ್ರಹ್ಮಸ್ವರೂಪನಾದ ಸದ್ಗುರುವಿಗೆ ನನ್ನ ನಮನಗಳು.

### ೩. ವಿನಾಯಕನಿಗೆ ಪ್ರಾರ್ಥನೆ

**ವಕ್ರತುಂಡ ಮಹಾಕಾಯ ಕೋಟಿಸೂರ್ಯ ಸಮಪ್ರಭ ।**
**ನಿರ್ವಿಘ್ನಂ ಕುರು ಮೇ ದೇವ ಸರ್ವಕಾರ್ಯೇಷು ಸರ್ವದಾ ॥**

ಹೇ ಗಜವದನ (ವಕ್ರತುಂಡ ಗಣಪತಿಯೆ), ಬೃಹತ್ ಶರೀರವುಳ್ಳವನೇ (ಮಹಾಕಾಯನೆ), ಕೋಟಿಸೂರ್ಯರ ಪ್ರಭೆಗೆ ಸಮಾನವಾದ ಕಾಂತಿಯುಳ್ಳವನೇ, ನನ್ನ ಎಲ್ಲ ಕೆಲಸಗಳೂ ವಿಘ್ನವಿಲ್ಲದೆ ನೆರವೇರುವಂತೆ ಮಾಡು.